ಅಸ್ಪಷ್ಟತೆ ಭಾರತೀಯ ಚಿಂತನೆಯ ಅವಿಭಾಜ್ಯ ಅಂಗವಾಗಿವೆ' ಎನ್ನಿಸುತ್ತಿತ್ತು.

'ಒಂದು ಬೇಡಿಕೆಗೆ ತಕ್ಕಂತೆ ನಿರ್ದಿಷ್ಟ ಕಾರ್ಯಕ್ರಮ; ಆ ಕಾರ್ಯಕ್ರಮವನ್ನು ಜಾರಿಗೆ ತರುವ ಮಾರ್ಗ; ಹಾಗೂ ಅದಕ್ಕೆ ತಕ್ಕ ಪರಿಸರ ನಿರ್ಮಾಣ– ಇವು ರಾಜಕೀಯ ಪಕ್ಷದ ಗುರಿಯಾಗಬೇಕು.' ಇದು ಲೋಹಿಯಾ ಹೇಳುತ್ತಿದ್ದ ತಕ್ಷಣದ ಗುರಿ. ಇದರ ಜೊತೆಗೆ ಭಾರತೀಯ ಸಮಾಜದಲ್ಲಿರುವ ಹಲ ಬಗೆಯ ಭೇದಗಳನ್ನು, ತಾರತಮ್ಯಗಳನ್ನು ಹೊಡೆದೋಡಿಸದಿದ್ದರೆ ಹೊಸ ರಾಜಕೀಯ ಸಾಧ್ಯವಿಲ್ಲ ಎಂಬುದು ಅವರಿಗೆ ಖಾತ್ರಿಯಾಗಿತ್ತು. ಈ ಘಟ್ಟದಲ್ಲಿ ಲೋಹಿಯಾ ಭಾರತೀಯ ಸಮಾಜದ ನಿಷ್ಠುರ ವಿಮರ್ಶೆಯನ್ನು ಆರಂಭಿಸಿದರು:

'ಇಡೀ ಜಗತ್ತಿನಲ್ಲೇ ಭಾರತೀಯರು ಕಡು ದುಃಖಿಗಳು. ಅವರು ಕಡುಬಡವರಾಗಿರುವುದರ ಜೊತೆಗೆ ಅತ್ಯಂತ ರೋಗಪೀಡಿತರಾಗಿರುವುದು ಕೂಡ ಈ ದುಃಖಕ್ಕೆ ಕಾರಣ... ಭಾರತೀಯರು ಬದುಕಿಗೆ ಹೇಗೆ ಜೋತುಬಿದ್ದಿದ್ದಾರೆಂದರೆ, ಅವರು ಕಡುದುಃಖದ ಮಡುವಿನಲ್ಲೇ ನರಳಿ ಹೇಗೋ ಬದುಕು ನೂಕಬಯಸುವವರೇ ಹೊರತು, ಏನಾದರೊಂದು ಮಹತ್ವದ ಪ್ರಯತ್ನ ಮಾಡುವ ಸಾಹಸಕ್ಕಿಳಿಯುವವರಲ್ಲ. ಆದರೆ, ಹಣ ಹಾಗೂ ಅಧಿಕಾರ ಕುರಿತ ದುರಾಸೆಯಲ್ಲಿ ಮಾತ್ರ ಜಗತ್ತಿನ ಯಾವ ಜನಾಂಗವೂ ಅವರನ್ನು ಮೀರಿಸಲಾರದು.

ಜಾತಿಭೇದ ಹಾಗೂ ಸ್ತ್ರೀಯರನ್ನು ಕುರಿತ ಭೇದಭಾವದ ಮನೋಭಾವಗಳೇ ಭಾರತೀಯ ಚೇತನದ ಈ ಅಧೋಗತಿಗೆ ಮೂಲಕಾರಣ. ಸಾಹಸವನ್ನೂ, ಆನಂದವನ್ನೂ ಸೃಷ್ಟಿಸುವ ಸಾಮರ್ಥ್ಯವನ್ನೇ ಕೊಲ್ಲುವ ಶಕ್ತಿ ಈ ಪ್ರತ್ಯೇಕತಾವಾದಿ ಮನಸ್ಥಿತಿಗಿದೆ.'

ಇದು ಸ್ವತಂತ್ರ ಭಾರತದಲ್ಲಿ ರಾಜಕೀಯ ಪಕ್ಷವೊಂದರ ಮುಂಚೂಣಿ ನಾಯಕನೊಬ್ಬ ಖಚಿತವಾದ, ನೇರ ಸಾಮಾಜಿಕ ವಿಮರ್ಶೆಯನ್ನು ಆರಂಭಿಸಿದ ಮೊದಲ ಮುಖ್ಯ ಉದಾಹರಣೆಯಾಗಿತ್ತು. ಲೋಹಿಯಾಗಿಂತ ಮೊದಲೇ ಅಂಬೇಡ್ಕರ್ ಇದಕ್ಕಿಂತ ಕಟುವಾದ ವಿಮರ್ಶೆಯ ಮೂಲಕ ಸಮಾಜ ಪರಿವರ್ತನೆಯ ಕೆಲಸವನ್ನಾರಂಭಿಸಿದ್ದರು. ಆದರೆ ಅಂಬೇಡ್ಕರ್ ರೂಪಿಸಿದ್ದ ಸಾಮಾಜಿಕ ವಿಮರ್ಶೆಯನ್ನು ರಾಜಕೀಯವಾಗಿ ಕೊಂಡೊಯ್ಯುವ ಪಕ್ಷ ಸಿದ್ಧವಾಗಿರಲಿಲ್ಲ.

ಭಾರತೀಯ ಮನಸ್ಸಿನಲ್ಲಿ ಬೇರುಬಿಟ್ಟಿದ್ದ ಜಾತಿಭೇದವನ್ನು ಕಿತ್ತೊಗೆಯಲು ಪಕ್ಷವನ್ನು ಸಜ್ಜುಗೊಳಿಸುತ್ತಿದ್ದ ಲೋಹಿಯಾರನ್ನು ಭಾರತದ ರಾಷ್ಟ್ರಪತಿಗಳ ಒಂದು ಬಹಿರಂಗ ಆಚರಣೆ ಸಿಟ್ಟಿಗೆಬ್ಬಿಸಿತು:

ನವೆಂಬರ್ 1952. ವಾರಣಾಸಿಯಲ್ಲಿ ಭಾರತದ ಪ್ರಥಮ ರಾಷ್ಟ್ರಪತಿ ಬಾಬೂ ರಾಜೇಂದ್ರ ಪ್ರಸಾದರು 200 ಬ್ರಾಹ್ಮಣ ಪಂಡಿತರ ಕಾಲು ತೊಳೆದರು. ಅವರ ಕಾಲುಗಳಿಗೆ ಗಂಧ ಹಚ್ಚಿದರು. ಸಿಹಿ ತಿನಿಸು ಕೊಟ್ಟರು. ತಲಾ ಹನ್ನೊಂದು ರೂಪಾಯಿ ದಕ್ಷಿಣೆ ಕೊಟ್ಟರು.

'ಕೊನೆಗೂ ರಾಮರಾಜ್ಯ ಬಂತು!' ಎಂದು ಆರ್. ಕೆ. ಲಕ್ಷ್ಮಣ್ ಕಾರ್ಟೂನ್ ಈ ಘಟನೆಯನ್ನು ಲೇವಡಿ ಮಾಡಿತು. ಅಂಬೇಡ್ಕರ್ ಕೂಡ ರಾಷ್ಟ್ರಪತಿಗಳ ಈ ನಡೆಯನ್ನು ಟೀಕಿಸಿದರು.

ಈ ಆಚರಣೆಯನ್ನು ಲೋಹಿಯಾ ತೀವ್ರವಾಗಿ ವಿರೋಧಿಸಿದರು:

'ಬನಾರಸ್ ಪುಣ್ಯಕ್ಷೇತ್ರದಲ್ಲಿ ಭಾರತೀಯ ಗಣರಾಜ್ಯದ ಅಧ್ಯಕ್ಷರು ಸಾರ್ವಜನಿಕವಾಗಿ ಇನ್ನೂರು ಜನ ಬ್ರಾಹ್ಮಣರ ಕಾಲು ತೊಳೆದರು. ಹೀಗೆ ಸಾರ್ವಜನಿಕವಾಗಿ ಒಬ್ಬ ಇನ್ನೊಬ್ಬನ ಕಾಲು ತೊಳೆಯುವುದು ಅಸಹ್ಯಕರವಾದದ್ದು. ವಿದ್ಯೆ, ಗುಣ ಒಂದೂ ಇಲ್ಲದ ಅನೇಕರಿಗೆ ಕೇವಲ ಬ್ರಾಹ್ಮಣರೆಂಬ ಆಧಾರದ ಮೇಲೆ ಈ ಸವಲತ್ತನ್ನು ನೀಡುವುದಂತೂ ಸರಿತಪ್ಪುಗಳ ಪ್ರಜ್ಞೆ ಸಂಪೂರ್ಣ ಮಾಯವಾಗಿರುವುದರ ಸೂಚನೆ. ಸಹಜವಾಗಿಯೇ ಇವೆಲ್ಲ ಜಾತಿಪದ್ಧತಿ ಹಾಗೂ ಹುಚ್ಚುತನಗಳ ಜೊತೆಗೇ ಇರುತ್ತವೆ.

ರಾಷ್ಟ್ರಪತಿಗಳು ನನ್ನ ಗೌರವವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ. ಕಾರಣ, ಬ್ರಾಹ್ಮಣರ ಕಾಲುಗಳನ್ನು ಸಾರ್ವಜನಿಕವಾಗಿ ತೊಳೆಯುವ ಕೈಗಳು ಶೂದ್ರರನ್ನೂ, ಹರಿಜನರನ್ನೂ ಒದೆಯಬಲ್ಲ ಕಾಲುಗಳ ಜೊತೆಗೇ ಇರುತ್ತವೆ.

ಈ ಆಚರಣೆಯಲ್ಲಿ ಭಾಗಿಯಾಗಲು ಹಿಂಜರಿದ ಸಂಸ್ಕೃತ ಪಂಡಿತರೊಬ್ಬರನ್ನು ಮೆಚ್ಚುತ್ತಾ ಲೋಹಿಯಾ ಬರೆದರು: 'ಈ ಭಯಾನಕ ರಾಕ್ಷಸ ಆಟದಲ್ಲಿ ಮನುಷ್ಯನಂತೆ ವರ್ತಿಸಿದ ಏಕೈಕ ವ್ಯಕ್ತಿ ಈತ.'

ಆ ಹೊತ್ತಿಗಾಗಲೇ ಗಾಂಧೀಜಿಯವರ ಸುಧಾರಣಾವಾದಿ ಭಾಷೆ; ಅಂಬೇಡ್ಕರ್ ಅವರ ಬರಹ, ಕ್ರಿಯೆ, ಮಾತು; ಪೆರಿಯಾರ್ ಚಿಂತನೆ, ಕ್ರಿಯೆ – ಇವೆಲ್ಲಕ್ಕೂ ಹೊಸ ತಲೆಮಾರು ತೆರೆದುಕೊಳ್ಳುತ್ತಿತ್ತು. ಇದೀಗ ದೇಶಾದ್ಯಂತ ಎಲ್ಲ ಜಾತಿಗಳ ಮುಕ್ತ ಮನಸ್ಸಿನ ತರುಣ, ತರುಣಿಯರು, ಲೇಖಕ, ಲೇಖಕಿಯರು, ರಾಜಕಾರಣಿಗಳು ಲೋಹಿಯಾ ಕಡೆಗೆ ತಿರುಗಿದರು.

ತಮ್ಮ ಸಾಮಾಜಿಕ ಆಶಯಗಳನ್ನು ಲೋಹಿಯಾ ಪಕ್ಷದ ನೆಲೆಯಲ್ಲೂ ವಿಸ್ತರಿಸಲೆತ್ನಿಸಿದರು: 'ಸಮಾಜವಾದಿ ಪಕ್ಷ ಮಹಿಳೆಯರ, ಶೂದ್ರರ ಪಕ್ಷವಾಗಬೇಕು'; 'ಸಮಾಜವಾದಿ ಪಕ್ಷ ಶೇಕಡ ತೊಂಬತ್ತೊಂಬತ್ತು ಭಾಗ ದಲಿತ ಜನರ ಪಕ್ಷವಾಗಬೇಕು'; 'ಬ್ರಾಹ್ಮಣನೂ ಶೂದ್ರನೂ ಅರೆಜೀವವಾಗಿ ಬಿದ್ದಿದ್ದಾರೆ. ಒಬ್ಬರು ಮತ್ತೊಬ್ಬರನ್ನು ಮೇಲೆತ್ತಬೇಕಾಗಿದೆ'... ಈ ಬಗೆಯ ಮಾತುಗಳು ಲೋಹಿಯಾರ ರಾಜಕೀಯ ಭಾಷಣಗಳಲ್ಲಿ ಕೇಳಿ ಬರುತ್ತಿದ್ದವು.

ಸಮಾಜವಾದಿ ಯುವಜನ ಸಭಾದ ತರುಣರು ಈ ಆಶಯಗಳನ್ನು ಹೊಸ ಹುಡುಗ, ಹುಡುಗಿಯರಲ್ಲಿ ಹಬ್ಬಿಸತೊಡಗಿದರು. 1980ರ ದಶಕದಿಂದೀಚೆಗೆ ಹಸನ್ ನಯೀಂ ಸುರಕೋಡ ಈ ಚಿಂತನೆಗಳನ್ನು ಹಿಂದಿಯಿಂದ ಕನ್ನಡಕ್ಕೆ ತರತೊಡಗಿದರು.

ಲೋಹಿಯಾ ಜೀವನಯಾನದ ಬರವಣಿಗೆಯ ಈ ಘಟ್ಟದಲ್ಲಿ ಲೋಹಿಯಾ ನೋಡಲು ಹೇಗಿದ್ದರು ಎಂಬುದನ್ನು ಕುರಿತ ವಿವರಗಳನ್ನು ಕೊಡಬಹುದು:

ಇಂದುಮತಿ ಕೇಳ್ಕರ್ ಕಂಡಂತೆ ಲೋಹಿಯಾ ಹೀಗಿದ್ದರು: 'ಕೊಂಚ ಮಟ್ಟಸವಾದ ಆಕೃತಿ. ಕಂದು ಬಣ್ಣ, ಕುಸ್ತಿ ಪಟುವಿನ ನಿಲುವು, ವಿಶಾಲ ಹಣೆ, ಕನ್ನಡಕದೊಳಗಿಂದ ಸೀಳುವಂತೆ ನೋಡುವ ತೇಜಸ್ಸಿನ ಕಣ್ಣು, ದೃಢವಾದ ಗಲ್ಲ, ತುಟಿಗಳ ಮೇಲೆ ಒಂಥರದ ತುಂಟ ನಗೆ, ಎದ್ದು ಕಾಣುವ ನೇರ ನಡೆ ನುಡಿ, ಅಪಾರ ಚೈತನ್ಯ...

ಕೋಣಂದೂರು ಲಿಂಗಪ್ಪ ಕಂಡಂತೆ, ಲೋಹಿಯಾ 'ಕಂದು ಬಣ್ಣದ, ಐದೂವರೆ ಅಡಿಗಿಂತ ಕೊಂಚ ಎತ್ತರದ, ಗಡಸಾದ, ಖಚಿತ ದನಿಯ ವ್ಯಕ್ತಿ'.

ಲೋಹಿಯಾ ವ್ಯಕ್ತಿತ್ವದ ಒಂದು ಮುಖ್ಯ ಗುಣವೆಂದರೆ ಅವರ ಸಂಪರ್ಕಕ್ಕೆ ಬಂದವರು ಬಹು ಬೇಗ ಅವರಿಗೆ ಅಂಟಿಕೊಳ್ಳುತ್ತಿದ್ದರು. ಆದರೆ ಲೋಹಿಯಾ ದೇಶಾವರಿಯಾಗಿ ಸಂಬಂಧ ಉಳಿಸಿಕೊಳ್ಳುವ ವ್ಯಕ್ತಿಯಾಗಿರಲಿಲ್ಲ. ಸತ್ಯಕ್ಕೆ ಹತ್ತಿರವಾದ ಲೋಹಿಯಾ ಮಾತುಗಳನ್ನು ಸಹಿಸಿಕೊಂಡವರು ಮಾತ್ರ ದೀರ್ಘ ಕಾಲ ಅವರ ಗೆಳೆಯ, ಗೆಳತಿಯರಾಗಿ ಉಳಿಯುತ್ತಿದ್ದರು.

'ಕೆಲವರನ್ನಾದರೂ ಸಿಟ್ಟಿಗೆಬ್ಬಿಸದೆ ಏನನ್ನೂ ಮಾಡಲಾಗದು' ಎಂದು ಲೋಹಿಯಾ ಎಪ್ಪತ್ತು ವರ್ಷಗಳ ಕೆಳಗೆ ಬರೆದರು. ಈ ಮಾತನ್ನು ಐವತ್ತು ವರ್ಷಗಳ ಕೆಳಗೆ ಚನ್ನಪಟ್ಟಣ ತಾಲೂಕಿನ ನಾಗವಾರದಲ್ಲಿ ನಡೆದ ಮದುವೆಯೊಂದರ ಪೆಂಡಾಲಿನಲ್ಲಿ ಬೋರ್ಡಿನ ಮೇಲೆ ಬರೆಯಲಾಗಿತ್ತು. ಲೋಹಿಯಾ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಕಾಳೇಗೌಡ ನಾಗವಾರ ಐವತ್ತು ವರ್ಷಗಳ ಕೆಳಗೆ ಸಂಪ್ರದಾಯಗಳನ್ನು ವಿರೋಧಿಸಿ ಕೆಂಪಮ್ಮನವರನ್ನು ಮದುವೆಯಾದರು. ಮದುವೆ ನಡೆಸಿಕೊಟ್ಟವರು ಆ ಕಾಲದ ಪ್ರಜಾ ಸಮಾಜವಾದಿ ಪಕ್ಷದ ರಾಜಕಾರಣಿ ಕೆ.ಎಚ್. ರಂಗನಾಥ್.

ರಾಜಕೀಯ ಪಕ್ಷವನ್ನು ಮುನ್ನಡೆಸುತ್ತಿದ್ದಾಗಲೂ ಲೋಹಿಯಾ ಪ್ರಭಾವಶಾಲಿಗಳನ್ನು ಅಸಂತೋಷಗೊಳಿಸಲು ಹಿಂಜರಿಯುತ್ತಿರಲಿಲ್ಲ. ಶ್ರೀಮಂತ ವ್ಯಾಪಾರಿಯೊಬ್ಬನ ಜೊತೆಗಿನ ಇಂಥದೊಂದು ಮುಖಾಮುಖಿಯನ್ನು ಲೋಹಿಯಾ ನೆನೆಯುತ್ತಾರೆ:

'ಆತ ಎರಡು ಗಂಟೆಗಳ ಕಾಲ ನನ್ನನ್ನು ಹೊಗಳಿ ಉಬ್ಬಿಸಲು ಪ್ರಯತ್ನಿಸಿದ್ದ. ಕಾರಣ, ತುಂಟನೊಬ್ಬ ಇವನಿಗೆ ಫೋನ್ ಮಾಡಿ, ಕಾಳದಂಧೆಗಳನ್ನು ನಡೆಸುತ್ತಿರುವ ಇವನ ಫ್ಯಾಕ್ಟರಿಯನ್ನು ಸಮಾಜವಾದಿ ಪಕ್ಷದ ಸದಸ್ಯರು ಸುಟ್ಟುಹಾಕುತ್ತಾರೆಂದು ಹೇಳಿದ್ದನಂತೆ. ಈ ಹಿನ್ನೆಲೆಯಲ್ಲಿ ನನ್ನನ್ನು ಪ್ರಸನ್ನಗೊಳಿಸಲು ಯತ್ನಿಸುತ್ತಾ, ಪಾರ್ಟಿ ಫಂಡಿಗೆ ಅಷ್ಟಿಷ್ಟು ಕೊಡಬಲ್ಲೆ ಎಂದು ಹೇಳುವ ಧೈರ್ಯವನ್ನೂ ಅವನು ತೋರಿದ. ಆದರೆ ನಾನು ಅವನ ಅವ್ಯವಹಾರಗಳನ್ನು ಮುಚ್ಚಿಹಾಕಲು ಹಣ ತೆಗೆದುಕೊಳ್ಳುವಷ್ಟು ದುರುಳನಾಗಿರದಿದ್ದರಿಂದ ಮತ್ತೆ ಅವನೆಂದೂ ತನ್ನ ಉದಾರ ಬುದ್ಧಿಯನ್ನು ಪ್ರದರ್ಶಿಸಲಿಲ್ಲ.'

ಈ ಘಟನೆ ನೆನೆಯುತ್ತಾ ಲೋಹಿಯಾಗೆ ಕೋಪ ಉಕ್ಕುತ್ತದೆ; 'ಬಾಂಬ್ ಅಥವಾ ಆ್ಯಸಿಡ್ ಬಲ್ಬ್